<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಸಿಆಸುಇ 259 ಎಟಿಸಿ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 13ನೇ ಜುಲೈ 2005

## ಸುತ್ತೋಲೆ

ವಿಷಯ: ನ್ಯಾಯಾಲಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ತಕ್ಷಣ ಕ್ರಮ ಕೈಗೊಳ್ಳುವ ಬಗ್ಗೆ.

...

2002 ರಲ್ಲಿ ನೋಟಿಸನ್ನು ಜಾರಿಗೊಳಿಸಿದ್ದರೂ ಸಹ ಸಂಬಂಧಪಟ್ಟ ಜಿಲ್ಲಾಧಿಕಾರಿಯು ನ್ಯಾಯಾಲಯದ ಮುಂದೆ ಹಾಜರಾಗದಿರುವುದನ್ನು ಮಾನ್ಯ ಉಚ್ಚ ನ್ಯಾಯಾಲಯವು ಇತ್ತೀಚೆಗೆ ರಿಟ್ ಪಿಟಿಷನ್ ಸಂಖ್ಯೆ 40139/2002 ರ ಕುರಿತು ನಡೆದ ವಿಚಾರಣೆಯಲ್ಲಿ ಗಮನಿಸಿದೆ. ಈ ಕುರಿತು ಜಿಲ್ಲಾಧಿಕಾರಿಯು ತಮ್ಮ ಪರವಾಗಿ ಹಾಜರಾಗಲು ಒಬ್ಬ ವಕೀಲರನ್ನು ಗೊತ್ತುಮಾಡಿರುವುದಿಲ್ಲ ಅಥವಾ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಅದಲ್ಲದೇ ನ್ಯಾಯಾಲಯವು ಈ ಪ್ರಕರಣದ ವಿಚಾರಣೆಯನ್ನು ಮುಂದುವರಿಸಲು ಅನುವಾಗುವಂತೆ ದಾಖಲೆಗಳನ್ನು ಸದರಿ ಅಧಿಕಾರಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನ್ಯಾಯಾಲಯವು ಈ ತಪ್ಪನ್ನು ಗಂಭೀರವಾಗಿ ಪರಿಗಣಿಸಿ ಈ ಪ್ರಕರಣದ ಬಗೆಗಿನ ದಾಖಲಾತಿಗಳೊಂದಿಗೆ ದಿನಾಂಶ 13.7.2005 ರಂದು ಉಚ್ಚ ನ್ಯಾಯಾಲಯದ ಮುಂದೆ ಹಾಜರಾಗುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ನಿರ್ದೇಶನವನ್ನು ನೀಡಿತ್ತು. ಅದರಂತೆ ಮುಖ್ಯ ಕಾರ್ಯದರ್ಶಿಯವರು ಉಚ್ಚ ನ್ಯಾಯಾಲಯದ ಮುಂದೆ ಹಾಜರಾಗಿದ್ದರು. ಸಂಬಂಧಪಟ್ಟ ಜಿಲ್ಲಾಧಿಕಾರಿಯು ಸಹ ನ್ಯಾಯಾಲಯದ ಮುಂದೆ ಹಾಜರಾಗಿ ಕ್ಷಮೆ ಕೋರಿದರು.

2. ನ್ಯಾಯಾಲಯವು ಜಿಲ್ಲಾಧಿಕಾರಿಯ ಈ ಗೈರುಹಾಜರಾತಿಯನ್ನು ಗಂಭೀರವಾಗಿ ಪರಿಗಣಿಸಿದೆ. ಈ ವಿಷಯದಲ್ಲಿ ಜಿಲ್ಲಾಧಿಕಾರಿಯ ವಿವರಣೆಯನ್ನು ಕೇಳಲಾಗಿದ್ದು, ಒಂದು ವೇಳೆ ಅವರ ವಿವರಣೆಯು ತೃಪ್ತಿಕರವಾಗಿರದಿದ್ದಲ್ಲಿ ಶಿಸ್ತು ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಿದ ನಂತರ ನ್ಯಾಯಾಲಯಕ್ಕೆ ಸ್ವಲ್ಪ ಸಮಾಧಾನವಾಯಿತು. ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಪಟ್ಟ ವಿಷಯಗಳನ್ನು ನಿರ್ವಹಿಸುವಲ್ಲಿ ಅಧಿಕಾರಿಗಳ ನಿರ್ಲಕ್ಷತನದ ಬಗ್ಗೆ ನ್ಯಾಯಾಲಯವು ತನ್ನ ಬೇಗುದಿಯನ್ನು ವ್ಯಕ್ತಪಡಿಸಿತಲ್ಲದೆ ಇಂತಹ ಲೋಪಗಳು ಮರುಕಳಿಸದಂತೆ ಖಚಿತಪಡಿಸಲು ಆಡಳಿತ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸಬೇಕೆಂದು ತಿಳಿಸಿತು.

3. ಸಚಿವಾಲಯದ ಹಂತದಲ್ಲಿ, ನ್ಯಾಯಾಲಯ ಪ್ರಕರಣಗಳಿಗಾಗಿಯೇ FMS ಅಡಿಯಲ್ಲಿ ಒಂದು ಪ್ರತ್ಯೇಕ ಮೇಲುಸ್ತುವಾರಿ ವ್ಯವಸ್ಥೆಯನ್ನು ಒದಗಿಸಲು ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಗವರ್ನೆನ್ಸ್) ಇವರನ್ನು ನಾನು ಈಗಾಗಲೇ ಕೋರಿದ್ದು, ಅವರು ಈ ಸಂಬಂಧದಲ್ಲಿ ಆದ ಪ್ರಗತಿಯನ್ನು ತಿಳಿಸುವರು. ಉಳಿದಂತೆ ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು ಹಾಗು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಇತ್ಯಾದಿ, ಇವರುಗಳು ಬಾಕಿ ಇರುವ ನ್ಯಾಯಾಲಯ ಪ್ರಕರಣಗಳ ಪಟ್ಟಿಯನ್ನು ಅವುಗಳ ಮುಂದಿನ ವಿಚಾರಣಾ ದಿನಾಂಕ, ಇತ್ಯಾದಿ ಮಾಹಿತಿಯನ್ನು ಒಳಗೊಂಡಿರುವ ವಿವರಗಳನ್ನು ಗಣಕಯಂತ್ರದಲ್ಲಿಯೇ ಇಟ್ಟುಕೊಳ್ಳಲು ಈ ಮೂಲಕ ಸಲಹೆ ಮಾಡಿದೆ. ಅಂತಹ ಪಟ್ಟಿಯನ್ನು ಯಾವುದೇ ಕಚೇರಿಯಲ್ಲಿ ಗಣಕ ಯಂತ್ರದಲ್ಲಿ ಇಟ್ಟುಕೊಳ್ಳಲು ವ್ಯವಸ್ಥೆ ಇಲ್ಲದ ಪಕ್ಷದಲ್ಲಿ ಈ ಬಗ್ಗೆ ಎಲ್ಲಾ ಮಾಹಿತಿಯನ್ನು ಒಳಗೊಂಡ ರಿಜಿಸ್ಟರ್ ಒಂದನ್ನು ನಿರ್ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಕಚೇರಿಯ ಮುಖ್ಯಸ್ಥರು ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳಲ್ಲಿ ಸಾಧಿಸಲಾದ ಪ್ರಗತಿ, ಹಾಗೂ ಪ್ರತಿಯೊಂದು ಪ್ರಕರಣದಲ್ಲಿ ಕೈಗೊಂಡ ಕ್ರಮದ ಬಗ್ಗೆ ಕಾಲಕಾಲಕ್ಕೆ ಪುನರಾವಲೋಕನ ಮಾಡತಕ್ಕದ್ದು. ವರ್ಗಾವಣೆ ನಂತರ ವರ್ಗಾವಣೆಗೊಂಡ ಅಧಿಕಾರಿಯು ಅಧಿಕಾರ ವಹಿಸಿಕೊಳ್ಳುವ ಅಧಿಕಾರಿಗೆ ಅಂತಹ ಬಾಕಿಯಿರುವ ನ್ಯಾಯಾಲಯ ಪ್ರಕರಣಗಳ ಪಟ್ಟಿಯನ್ನು ನೀಡುವುದರ ಜೊತೆಗೆ ಹೊಸ ಅಧಿಕಾರಿಗೆ ಪ್ರಾಮುಖ್ಯವಾದ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ನೀಡುವುದು. ಆ ರೀತಿ ಒಂದು ಕ್ರಮಬದ್ಧವಾದ ವ್ಯವಸ್ಥೆ ಇದ್ದರೆ ಮೇಲ್ಕಂಡಂತಹ ಲೋಪವು ಮರುಕಳಿಸಲು ಆಸ್ಪದವಿರುವುದಿಲ್ಲ. ಜಿಲ್ಲಾ ಮಟ್ಟದಲ್ಲೂ ಅಲ್ಲಿರುವ ಇತರ ಅಧಿಕಾರಿಗಳಿಗೆ ಇದೇ ರೀತಿಯ ಕ್ರಮವಹಿಸಲು ಜಿಲ್ಲಾಧಿಕಾರಿಗಳು: ಕಾರ್ಯನಿರ್ವಹಣಾಧಿಕಾರಿಗಳು:ಇಲಾಖಾ ಮುಖ್ಯಸ್ಥರುಗಳು ಎಲ್ಲಾ ಸಂಬಂಧಪಟ್ಟವರಿಗೆ ಸೂಕ್ತ ಸೂಚನೆ ನೀಡತಕ್ಕದ್ದು.

(ಕೆ.ಕೆ. ಮಿಶ್ರ)
ಮುಖ್ಯ ಕಾರ್ಯದರ್ಶಿ

ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳಿಗೆ.
ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ/ಕಾರ್ಯದರ್ಶಿಗಳಿಗೆ.
ಎಲ್ಲಾ ಇಲಾಖಾ ಮುಖ್ಯಸ್ಥರಿಗೆ/ಜಿಲ್ಲಾಧಿಕಾರಿಗಳಿಗೆ/ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ.